**21 ಸೆಪ್ಟೆಂಬರ್ , 2017**

## ನಾಶಿಕ್ ಜಿಲ್ಲಾ ಗಿರ್ಣ ಸಹಕಾರಿ ಬ್ಯಾಂಕ್ ಲಿಮಿಟೆಡ್, ನಾಶಿಕ್ , ಮಹಾರಾಷ್ಟ್ರ-ಇದಕ್ಕೆ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 (ಎ ಎ ಸಿ ಎಸ್) ರ ಪ್ರಕರಣ 35 A ರ ಅಡಿಯಲ್ಲಿ ನಿರ್ದೇಶನ

ಭಾರತೀಯ ರಿಜರ್ವ್ ಬ್ಯಾಂಕ್ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949(ಎ ಎ ಸಿ ಎಸ್) ರ ಪ್ರಕರಣ 35 A ರ ಅಡಿಯಲ್ಲಿ ನಾಶಿಕ್ ಜಿಲ್ಲಾ ಗಿರ್ಣ ಸಹಕಾರಿ ಬ್ಯಾಂಕ್ ಲಿಮಿಟೆಡ್, ನಾಶಿಕ್ , ಮಹಾರಾಷ್ಟ್ರ -ಇದನ್ನು 08 ಸೆಪ್ಟೆಂಬರ್ 2015 ರಂದು ನೀಡಿದ್ದ ಆದೇಶದ ಪ್ರಕಾರ 09 ಸೆಪ್ಟೆಂಬರ್ 2016 ರ ವ್ಯವಹಾರ ಸಮಯದ ನಂತರದಿಂದ ಆರು ತಿಂಗಳುಗಳ ಕಾಲ ನಿರ್ದೇಶನಗಳಡಿ ಇರಿಸಲಾಗಿತ್ತು. ಹಾಗೂ ಈ ನಿರ್ದೇಶನಗಳ ಸಿಂಧುತ್ವವನ್ನು 03 ಮಾರ್ಚ್ 2016, 25 ಆಗಸ್ಟ್ 2016 ಹಾಗೂ 07 ಮಾರ್ಚ್ 2017 ರಂದು ಪ್ರತಿ ಬಾರಿ ಆರು ತಿಂಗಳುಗಳ ಕಾಲ ಮಾರ್ಪಡಿಸಿದ ನಿರ್ದೇಶನಗಳ ಆದೇಶದ ಮೂಲಕ ವಿಸ್ತರಿಸಲಾಗಿತ್ತು. ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲೆ ತಿಳಿಸಿದ ನಿರ್ದೇಶನಗಳ ಸಿಂಧುತ್ವವನ್ನು ನಮ್ಮ 01 ಸೆಪ್ಟೆಂಬರ್ 2017 ರಂದು ನೀಡಿದ ಆದೇಶದ ಅನುಸಾರ ಮತ್ತೆ ಆರು ತಿಂಗಳು ಅಂದರೆ 10 ಸೆಪ್ಟೆಂಬರ್ 2017 ರಿಂದ 09 ಮಾರ್ಚ್ 2018 ರ ವರೆಗೆ ವಿಸ್ತರಿಸಲಾಗಿದೆ (ಪರಿಶೀಲನೆಗೆ ಒಳಪಡುತ್ತದೆ).

ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೀಡಲ್ಪಟ್ಟ ಈ ತಿದ್ದುಪಡಿ ನಿರ್ದೇಶನವು, ಈ ಬ್ಯಾಂಕಿನ ಹಣಕಾಸಿನ ಪರಿಸ್ಥಿತಿಯಲ್ಲಿ ಗಣನೀಯವಾಗಿ ಸುಧಾರಣೆಯಾಗಿ ಭಾರತೀಯ ರಿಸರ್ವ್ ಬ್ಯಾಂಕಿಗೆ ತೃಪ್ತಿದಾಯಕವಾಗಿ ತೋರಿದೆಯೆಂದು ಅರ್ಥೈಸಿಕೊಳ್ಳಬಾರದು.

ನಿರ್ದೇಶನದ ಒಂದು ಪ್ರತಿಯನ್ನು ಬ್ಯಾಂಕ್ ಆವರಣದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗಿದೆ.

ಉಲ್ಲೇಖದ ಅಡಿಯಲ್ಲಿರುವ ನಿರ್ದೇಶನದ ಇತರ ನಿಯಮಗಳು ಮತ್ತು ಷರತ್ತುಗಳು ಬದಲಾಗದೆ ಹಾಗೆ ಉಳಿಯುತ್ತವೆ.

**ಅಜಿತ್ ಪ್ರಸಾದ್**
ಸಹಾಯಕ ಸಲಹೆಗಾರರು

**ಪತ್ರಿಕಾ ಪ್ರಕಟಣೆ : 2017-2018/798**